ಅಂಕೋಲಾ, ಸಿರಸಿ, ಯಲ್ಲಾಪುರ ತಾಲ್ಲೂಕುಗಳಿಗೆ ವಿದ್ಯುತ್ ಸಂಪರ್ಕ

1760 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1994-95 ರಿಂದ ಆರ್.ಇ.ಸಿ. ಸ್ಕೀಮ್‌ನಲ್ಲಿ ಎಲ್ಲೆಲ್ಲಿ ವಿದ್ಯುತ್ ನೀಡಲಾಗಿದೆ. (ಜಿಲ್ಲಾವಾರು ವಿವರ ನೀಡುವುದು)?

ಆ) 1994-95 ರಿಂದ ಅಂಕೋಲ ಸಿರ್ಸಿ - ಯಲ್ಲಾಪುರ ತಾಲ್ಲೂಕಿನಲ್ಲಿ ಆರ್.ಇ.ಸಿ. ಸ್ಕೀಮ್‌ನಲ್ಲಿ ಯಾವಯಾವ ಯೋಜನೆಗಳಿಂದ ಎಲ್ಲೆಲ್ಲಿ ವಿದ್ಯುತ್ ನೀಡಲಾಗಿದೆ? (ವಿವರವಾದ ಮಾಹಿತಿ ನೀಡುವುದು)

ಇ) ಅಂಕೋಲಾ-ಸಿರ್ಸಿ-ಯಲ್ಲಾಪುರ ತಾಲ್ಲೂಕಿನಲ್ಲಿ ಯಾವ ಯಾವ ಹಳ್ಳಿಗಳಿಗೆ ಇನ್ನೂ ವಿದ್ಯುತ್ ಸಂಪರ್ಕ ಒದಗಿಸಿರುವುದಿಲ್ಲ?

ಈ) ಇದರ ಬಗ್ಗೆ ಸರ್ಕಾರದ ಕ್ರಮ ಏನು?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ 1994-95 ರಿಂದ ಆರ್.ಇ.ಸಿ. ಸ್ಕೀಮ್‌ನಲ್ಲಿ ವಿದ್ಯುತ್ ನೀಡಲಾಗಿರುವುದರ ಜಿಲ್ಲಾವಾರು ವಿವರಗಳನ್ನು ಕೆಳಕಂಡಂತೆ ಕೊಡಲಾಗಿದೆ.

ಕ್ರ. ಸಂ.	ಜಿಲ್ಲೆಯ ಹೆಸರು	ಆರ್.ಇ.ಸಿ.ಸ್ಕೀಮ್‌ನ ಅಡಿಯಲ್ಲಿ ಮಾಡಿರುವ ವಿದ್ಯುದ್ದೀಕರಣದ ವಿವರ 30-6-97ರ ವರೆಗೆ		
		ಉಪಗ್ರಾಮಗಳು	ಹ.ಬಸ್ತಿಗಳು ಜನತಾ ಕಾಲೋನಿ : ತಾಂಡಾಗಳು	ಆಧಿವಾಸಿ ಕಾಲೋನಿಗಳು
1	2	3	4	5
1.	ಬೆಂಗಳೂರು	0	26	0
2.	ಬೆಳಗಾಂ	0	2	0
3.	ಬಳ್ಳಾರಿ	1	10	0
4.	ಬೀದರ್	1	5	0
5.	ಬಿಜಾಪುರ	2	0	0
6.	ಚಿತ್ರದುರ್ಗ	0	33	0
7.	ಧಾರವಾಡ	1	49	0
8.	ಗುಲ್ಬರ್ಗಾ	0	6	0

1	2	3	4	5
9.	ಹಾಸನ	11	14	0
10.	ಕೋಲಾರ	1	49	0
11.	ಮಂಡ್ಯ	5	12	0
12.	ಮೈಸೂರು	4	39	1
13.	ಉತ್ತರ ಕನ್ನಡ	80	5	0
14.	ರಾಯಚೂರು	0	16	0
15.	ಶಿವಮೊಗ್ಗ	29	13	0
16.	ದಕ್ಷಿಣ ಕನ್ನಡ	1	7	0
17.	ತುಮಕೂರು	0	14	0
18.	ಚಿಕ್ಕಮಗಳೂರು	-	-	-
19.	ಕೊಡಗು	-	-	-

ಆ) 1994-95 ರಿಂದ ಆರ್.ಇ.ಸಿ. (ಎಸ್.ಪಿ.ಎ) ಸ್ಕೀಮ್‌ನಲ್ಲಿ ಈ ಕೆಳಕಂಡಂತೆ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕಲ್ಪಿಸಲಾಗಿದೆ.

1) ಅಂಕೋಲಾ - 300 ಪಂಪುಸೆಟ್ಟುಗಳು.

2) ಸಿಸಿ - 510 ಪಂಪುಸೆಟ್ಟುಗಳು

3) ಯಲ್ಲಾಪುರ - 173 ಪಂಪುಸೆಟ್ಟುಗಳು

ಇದೇ ತಾಲ್ಲೂಕುಗಳಲ್ಲಿ ಹಳ್ಳಿಗಳ ವಿದ್ಯುದ್ದೀಕರಣ ಮುಗಿದಿದ್ದು, ಉಪಗ್ರಾಮಗಳ ವಿದ್ಯುದ್ದೀಕರಣಕ್ಕಾಗಿ 3 ಯೋಜನೆಗಳನ್ನು ಪ್ರತ್ಯೇಕವಾಗಿ ಈ ತಾಲ್ಲೂಕುಗಳಿಗೆ ತಯಾರಿಸಿದ್ದು, ಈ ಯೋಜನೆಗಳಲ್ಲಿ ಕೆಳಕಂಡಂತೆ ಸಾಧನೆಯನ್ನು 30-3-97 ರ ಅಂತ್ಯಕ್ಕೆ ಮಾಡಲಾಗಿದೆ.

1) ಅಂಕೋಲಾ - 8 ಉಪ ಗ್ರಾಮಗಳು

2) ಸಿಸಿ - 14 ”

3) ಯಲ್ಲಾಪುರ - 13 ”

ಇ) 1991ರ ಜನಗಣತಿಯಂತೆ ಈ ತಾಲ್ಲೂಕುಗಳಲ್ಲಿನ ಎಲ್ಲಾ ಹಳ್ಳಿಗಳ ವಿದ್ಯುದ್ದೀಕರಣ ಮುಗಿದಿದೆ. ಈ ತಾಲ್ಲೂಕುಗಳಲ್ಲಿ ಒಟ್ಟು 1337 ಉಪ ಗ್ರಾಮಗಳ ವಿದ್ಯುದ್ದೀಕರಣವಾಗಬೇಕಾಗಿದೆ. ಇದಕ್ಕಾಗಿ ಆರ್.ಇ.ಸಿ. ಯೋಜನೆಯಲ್ಲಿ ಕ್ರಮವಾಗಿ ಅಂಕೋಲಾ, ಯಲ್ಲಾಪುರ ಮತ್ತು ಸಿಸಿ ತಾಲ್ಲೂಕುಗಳಲ್ಲಿ 30,70 ಮತ್ತು 28 ಉಪಗ್ರಾಮಗಳ ವಿದ್ಯುದ್ದೀಕರಣಕ್ಕಾಗಿ ಈಗಾಗಲೇ ಸೇರಿಸಲಾಗಿದೆ.

ಈ) ಬಾಕಿ ವಿದ್ಯುದ್ದೀಕರಣವಾಗಬೇಕಾಗಿರುವ ಉಪ ಗ್ರಾಮಗಳಿಗೆ ಬರುವ ವರ್ಷಗಳಲ್ಲಿ ಮಂಡಳಿಗೆ ಬರುವ ಆರ್ಥಿಕ ನೆರವನ್ನು ಹಾಗೂ ಸಾಮಗ್ರಿಗಳ ಸರಬರಾಜು ಮತ್ತು ಸಿಬ್ಬಂದಿಯನ್ನು ಅವಲಂಬಿಸಿ ಹಂತ ಹಂತಗಳಲ್ಲಿ ಎಲ್ಲಾ ಉಳಿದ ಉಪಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗುವುದು.

ಗುಲ್ಬರ್ಗಾ ಜಿಲ್ಲೆಯ ಗಡಿ ವಿಭಾಗದಲ್ಲಿ ನಕ್ಸಲೀಯರ ಹಾವಳಿ

1761 - ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಗಡಿ ವಿಭಾಗಗಳ ಗ್ರಾಮಗಳಲ್ಲಿ ಇತ್ತೀಚೆಗೆ ನಕ್ಸಲೀಯರ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ತಡೆ ಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು).

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಬಂದಿದೆ. ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಆಂಧ್ರಪ್ರದೇಶದ ಗಡಿ ಭಾಗಗಳಲ್ಲಿನ ನಕ್ಸಲೀಯರಿಂದ ಒಡೆದು ಹೋದ ಒಂದು ಗುಂಪಾದ ರೆವೆಲ್ಯೂಷನರಿ ಪೆಟ್ರಿಯಾಟಿಕ್ ಟೈಗರ್ಸ್ (ಆರ್.ಪಿ.ಟಿ) ಗುಂಪಿಗೆ ಸೇರಿದವರು ಎಂದು ಹೇಳಲಾದ ಕೆಲವರು ಕೆಲವು ಗ್ರಾಮಗಳಲ್ಲಿ ಕೃತ್ಯವೆಸಗಿದ್ದು, ಇರುತ್ತದೆ.

ಆ) ಸರ್ಕಾರವು ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿ ಕೋನಗಳನ್ನು ಗಮನದಲ್ಲಿಟ್ಟುಕೊಂಡು ಆ ಕ್ಷೇತ್ರದ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಗತಿಗಳನ್ನು ಸುಧಾರಿಸಲು ಮತ್ತು ಪೋಲಿಸ್ ವ್ಯವಸ್ಥೆಯನ್ನು ಬಲಪಡಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಂಡಿದೆ.

1. 1988-89 ರಲ್ಲಿ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕುಗಳ ಸಮಸ್ಯೆಗಳನ್ನು ಅಧ್ಯಯನ ಮಾಡಲು ಶ್ರೀ ವಿ. ಬಾಲಸುಬ್ರಮಣಿಯನ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು.

2. ಆ ಸಮಿತಿಯ ವರದಿಯ ಪ್ರಕಾರ ಪಾವಗಡ ತಾಲ್ಲೂಕಿನ ತಿರುಮನಿ ಮತ್ತು ಚಿಂಚೋಳಿ ತಾಲ್ಲೂಕಿನ ಕುಂಜಾವರಂ ಪ್ರದೇಶಗಳನ್ನು ಒಳಗೊಂಡಂತೆ ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನೇರವಾಗಿ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಯಿತು.

3. ಈ ವರದಿ ಅನುಸರಿಸಿಯೇ ಸರ್ಕಾರವು ಗಡಿ ಪ್ರದೇಶ ಅಭಿವೃದ್ಧಿ ಯೋಜನೆ ಎಂಬ ಕಾರ್ಯಕ್ರಮವನ್ನು 1990-91ರಿಂದ ಜಾರಿಗೆ ತಂದು ಪ್ರತಿ ವರ್ಷವೂ ಅಯವ್ಯಯ ಏರ್ಪಾಟನ್ನು ಮಾಡುತ್ತಾ ಬಂದಿದೆ.